**ಪ್ರಧಾನ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು**

ಸಾಕ್ಷಿಯ ಹೆಸರು :- ಸತೀಶ
ತಂದೆ/ ಗಂಡನ ಹೆಸರು :- ವೆಂಕಟೇಗೌಡ
ವಯಸ್ಸು :- 35 ವರ್ಷ
ಉದ್ಯೋಗ :- ಅಬಕಾರಿ ಇಲಾಖೆ ಚಾಲಕ
ವಾಸಸ್ಥಳ :- ಕೊಪ್ಪ

(ಸಾಕ್ಷಿಗೆ ದಿನಾಂಕಃ 27-10-2025 ರಂದು ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ**

ನಾನು 20172 ರಿಂದ 2024 ರವರೆಗೆ ಮದ್ದೂರು ವಲಯದ ಅಬಕಾರಿ ಇಲಾಖೆಯಲ್ಲಿ ವಾಹನ ಚಾಲಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.30-04-2023 ರ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿದ್ದು ಅಬಕಾರಿ ಉಪಆಯುಕ್ತರು ಮಂಡ್ಯ ರವರ ನಿರ್ದೇಶನದ ಮೇರೆಗೆ ರಸ್ತೆ ಗಸ್ತು ಮಾಡುತ್ತಿದ್ದು, ಗೆಜ್ಜಲಗೆರೆ ಇಂಡಿಸ್ಟ್ರಿಯಲ್ ಏರಿಯಾದಲ್ಲಿ ಬೆಳಿಗ್ಗೆ 11-20 ರ ಸಮಯದಲ್ಲಿ ವಳಗೆರೆ ಹಳ್ಳಿ ಕಡೆಯಿಂದ ಸಾಯಿ ಗಾರ್ಮೆಂಟ್ಸ್ ಕಡೆಗೆ ನಮ್ಮ ವಾಹನ ಬರುತ್ತಿದ್ದು ವಿರುದ್ಧ ದಿಕ್ಕಿನಲ್ಲಿ ಒಬ್ಬ ವ್ಯಕ್ತಿಯು ದ್ವಿ ಚಕ್ರ ವಾಹನ ನಂಃ ಕೆಎ-11- ಇಪಿ 2846 ಹೋಂಡಾ ಆಕ್ಟಿವ್ ಬರುತ್ತಿದ್ದು ನಮ್ಮನ್ನು ಕಂಡು ಬೀಳಿಸಿ ಓಡಿ ಹೋಗಿರುತ್ತಾರೆ ನಾವು ಹಿಂಬಾಲಿಸಿ ಹೋಗಿದ್ದಾಗ್ಯೂ ಸದರಿಯವರು ಸಿಕ್ಕಿರುವುದಿಲ್ಲ. ನಂತರ ನಾವು ಸ್ಕೂಟರ್ ಬಳಿ ಬಂದು ಸಾರ್ವಜನಿಕರನ್ನು ಪಂಚರಾಗಿರುವಂತೆ ಕೋರಿದ್ದು ಸದರಿಯವರು ನಿರಾಕರಿಸಿದ್ದು, ನ್ಯಾಯಾಲಯದಿಂದ ಶೋಧನಾ ವಾರೆಂಟ್ ಪಡೆಯಲು ಸಮಯಾವಕಾಶ ಇಲ್ಲ ಕಾರಣ ನಿಯಮದಡಿಯಲ್ಲಿ ತಾನೇ ಶೋಧನಾ ವಾರೆಂಟ್ ನ್ನು ತಯಾರಿಸಿ, ಸದರಿ ನಿಂತಿದ್ದ ಗಾಡಿ ಮೇಲೆ ಇದ್ದ ಕಪ್ಪು ಬಣ್ಣದ ಪ್ಲಾಸ್ಟಿಕ್ ಕವರ್ ನ್ನು ಶೋಧಿಸಲಾಗಿ ಮದ್ಯ ಇರುವುದು ಕಂಡುಬಂದಿರುತ್ತದೆ. ಅದನ್ನು ಎಣಿಕೆ ಮಾಡಲಾಗಿ 90 ಮಿಲಿಯ ಸಿಲ್ವರ್ ಕಪ್ ಬ್ರಾಂದಿ 30 ಪೌಚ್ ಗಳು, 90 ಮಿಲಿಯ ಡಿ ಕೆ ವಿಸ್ಕಿಯ 20 ಟೆಟ್ರಾ ಪ್ಯಾಕ್ ಗಳು, ಒಟ್ಟು 4.500

ಲೀಟರ್ ಮದ್ಯ ಕಂಡು ಬಂದಿರುತ್ತದೆ. ವಾಹನವನ್ನು ಶೋಧಿಸಲಾಗಿ ಯಾವುದೇ ಪರವಾನಿಗೆ ಇರುವುದಿಲ್ಲ. ಓಡಿ ಹೋದ ಅಸಾಮಿ ಬಗ್ಗೆ ವಿಚಾರಿಸಲಾಗಿ ಸ್ಥಳೀಯರು ಗೊತ್ತಿಲ್ಲ ಎಂದು ತಿಳಿಸಿರುತ್ತಾರೆ. ಅವುಗಳಲ್ಲಿ ತಲಾ 15 ಟೆಟ್ರಾ ಪ್ಯಾಕ್ ಮತ್ತು 15 ಪೌಚ್ ಗಳನ್ನು ರಾಸಾಯನಿಕ ಪರೀಕ್ಷಾ ವರದಿಗಾಗಿ ಬಿಳಿ ಬಟ್ಟೆಯಲ್ಲಿ ಹಾಕಿ ದಾರದಿಂದ ಒಲೆದು ಅರಗಿನಿಂದ ಸೀಲ್ ಮಾಡಿರುತ್ತೇವೆ ಮತ್ತು ಮಾದರಿ ಸೀಲ್ ನಕಲನ್ನು ತಯಾರಿಸಿರುತ್ತೇವೆ. ಸದರಿ ವೇಳೆಯಲ್ಲಿ ಸ್ಥಳ ಮತ್ತು ಅಮಾನತ್ತು ಮಹಜರ್ ನ್ನು ತಯಾರಿಸಿರುತ್ತೇನೆ. ನಿಪಿ-3 ಮಹಜರ್ ನಲ್ಲಿರುವ ಸಾಕ್ಷಿಯು ತನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು.

ಸದರಿ ಮಹಜರ್ ನ್ನು ಬೆಳಿಗ್ಗೆ 11-20 ರಿಂದ 12.30 ಗಂಟೆಯವರೆಗೂ ಮಾಡಿರುತ್ತೇವೆ. ನಿಪಿ-2 ರಲ್ಲಿರುವ ಸಾಕ್ಷಿಯು ತನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಮುಂದಿನ ಕ್ರಮಕ್ಕಾಗಿ ವಿವಾದಿತ ವಾಹನ ಮತ್ತು ಮದ್ಯವನ್ನು ಠಾಣೆಗೆ ತಂದಿರುತ್ತೇವೆ. ನಾನು ಎಫ್ ಎಸ್ ಎಲ್ ಗೆ ಕಳುಹಿಸಿದ ಮದ್ಯದ ಪ್ಯಾಕ್ ಮತ್ತು ಪೌಚ ಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದೆಯಿರುವ ಎಂ ಓ-1 ಮತ್ತು 2 ಆ ದಿನ ಅಮಾನತ್ತುಪಡಿಸಿದ ಮತ್ತು ಎಫ್ ಎಸ್ ಎಲ್ ಗೆ ಕಳುಹಿಸಿದ ಮದ್ಯವಾಗಿದೆ. ಆ ದಿನ ಬೈಕ್ ಮತ್ತು ಮದ್ಯವನ್ನು ಬಿಟ್ಟು ಹೋದ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದೆಯಿರುವ ಆರೋಪಿಯೇ ಆ ದಿನ ಓಡಿ ಹೋದ ವ್ಯಕ್ತಿಯಾಗಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

**ಆ ದಿನ ಬೆಳಿಗ್ಗೆ 09-00 ಗಂಟೆಗೆ ಗಸ್ತು ಪ್ರಾರಂಭಿಸಿರುತ್ತೇವೆ. ಕೊಪ್ಪದಿಂದ ಮರಳಿಗ ಗ್ರಾಮದ ಕಡೆಗೆ ಗಸ್ತು ಹೊರಟಿದ್ದೆವು. ಕೊಪ್ಪ ತಲುಪಿದಾಗ ಸುಮಾರು 09-30 ಆಗಿತ್ತು. ಕೊಪ್ಪ ಮದ್ದೂರಿನಿಂದ 35 ಕಿ ಮೀ ಇದೆ ಎಂದರೆ 30 ಕಿ ಮೀ ಇದೆ ಎನ್ನುತ್ತಾರೆ. ನಾವು ಉತ್ತರ ದಿಕ್ಕಿನಲ್ಲಿ ಹೋಗುತ್ತಿದ್ದೆವು. ಸದರಿಯವರು ದಕ್ಷಿಣ ದಿಕ್ಕಿನಿಂದ ಬರುತ್ತಿದ್ದರು. ಸದರಿ ವಾಹನವನ್ನು ಮೊದಲಿಗೆ ಚಾಸಾ-1 ರವರು ಪರಿಶೀಲಿಸಿರುತ್ತಾರೆ. ಮಹಜರ್ ನಲ್ಲಿ ಮೊದಲಿಗೆ ಯಾರು ತಪಾಸಣೆ ಮಾಡಿದ್ದಾರೆಂದು ಬರೆಯಲಾಗಿದೆ. ಮಧ್ಯವಿದ್ದ ಕವರ್ ನ್ನು ಅಮಾನತ್ತುಪಡಿಸಲಾಗಿದೆ. ಸದರಿ ಕವರ್ ನ್ಯಾಯಾಲಯದಲ್ಲಿ ಇಲ್ಲ. ಚಾಸಾ-1 ಮತ್ತು**

2 ರವರು ನನ್ನೊಂದಿಗೆ ಇದ್ದರು. ಮಹಜರ್ ನ್ನು ಚಾಸಾ-2 ರವರು ಬರೆದಿರುತ್ತಾರೆ. ಆರೋಪಿಯು ಪೂರ್ವ ದಿಕ್ಕಿಗೆ ಓಡಿ ಹೋಗಿರುತ್ತಾರೆ. ಮಹಜರ್ ನಲ್ಲಿ ಓಡಿ ಹೋದ ದಿಕ್ಕನ್ನು ನಮೂದಿಸಿಲ್ಲ ಆದರೆ ಫ್ಯಾಕ್ಟರಿ ಕಡೆ ಓಡಿದ್ದಾರೆಂದು ನಮೂದಿಸಿದ್ದಾರೆ. ಆರೋಪಿಯ ಚಹರೆಯನ್ನು ಮಹಜರ್ ನಲ್ಲಿ ನಮೂದಿಸಿಲ್ಲ. ನಿಪಿ-3 ಕ್ಕೆ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ. ಮಹಜರ್ ನಲ್ಲಿ ಮದ್ಯದ ತಯಾರಿಕಾ ದಿನಾಂಕ ಮತ್ತು ಬ್ಯಾಚ್ ನ್ನು ನಮೂದಿಸಿಲ್ಲ. ಆರೋಪಿಯು ಮದ್ಯ ಮತ್ತು ಗಾಡಿಯನ್ನು ಬಿಟ್ಟು ಹೋಗಿದ್ದರು ಎಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಯಾವುದೇ ಸ್ಥಳ ಮಹಜರ್ ಮಾಡಿಲ್ಲದಿದ್ದರೂ ಮೇಲಾಧಿಕಾರಿಗಳ ಮಾತನ್ನು ಕೇಳಿಕೊಂಡು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಯನ್ನು ಇದೇ ಮೊದಲ ಭಾರಿಗೆ ನೋಡುತ್ತಿದ್ದು ಈ ಹಿಂದೆ ನೋಡಿದ್ದಾಗಿ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಎಂ ಓ-1 ಮತ್ತು 2 ಸ್ಥಳದಲ್ಲಿ ಸಿಕ್ಕಿದೆ ಎಂದು ಸುಳ್ಳು ನುಡಿಯುತ್ತಿದ್ದು ಪ್ರಕರಣಕ್ಕಾಗಿ ಸೃಷ್ಟಿ ಮಾಡಿದ್ದೆವೆ ಎಂದರೆ ಸರಿಯಲ್ಲ. ಮಹಜರ್ ನ್ನು ಸ್ಥಳದಲ್ಲಿ ಮಾಡಿದ್ದಲ್ಲಿ ಸಾರ್ವಜನಿಕರ ಸಹಿ ಪಡೆಯುತ್ತಿದ್ದೆವು ಆದರೆ ಠಾಣೆಯಲ್ಲಿ ಮಾಡಿದ್ದರಿಂದ ಸಹಿ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದ ವಿವಾದಿತ ಸ್ಥಳವೂ ಕೈಗಾರಿಕಾ ವಲಯವಾಗಿರುವುದರಿಂದ ಸಾಕಷ್ಟು ಜನರು ಓಡಾಡುತ್ತಿರುತ್ತಾರೆ ಎಂದರೆ ಸರಿ. ಸದರಿ ಸ್ಥಳದಲ್ಲಿ ಮದ್ಯವನ್ನು ಅಮಾನತ್ತುಪಡಿಸದ್ದೆ ಆದಲ್ಲಿ ಸಾರ್ವಜನಿಕರು ಸಹಿ ಪಡೆಯುತ್ತಿದ್ದರೀ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.

ನ್ಯಾಯಾಧೀಶರು, ಮದ್ದೂರು.

ಸಾಕ್ಷಿ ಸಹಿಃ